ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ : ಸಿ5(5)ದ್ವಿದ.ಸ ಬಡ್ತಿ-49/2020-21 ದಿನಾಂಕ : 30-01-2021

**ಅಧಿಸೂಚನೆ**

ವಿಷಯ : ಆಯುಕ್ತಾಲಯ ಘಟಕ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೂಪ್ ಡಿ ನೌಕರರಿಗೆ ದ್ವಿತೀಯ ದರ್ಜೆ ಸಹಾಯಕರ ವೃಂದಕ್ಕೆ ಮುಂಬಡ್ತಿ ನೀಡುವ ಬಗ್ಗೆ.

ಉಲ್ಲೇಖ: ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು 1967.

* * * * * *

ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ದ್ವಿತೀಯ ದರ್ಜೆ ಸಹಾಯಕರ ವೃಂದಕ್ಕೆ 33% ರ ಅನುಪಾತದಲ್ಲಿ ಎಸ್.ಎಸ್.ಎಲ್.ಸಿ ವಿದ್ಯಾರ್ಹತೆ ಹೊಂದಿದ್ದು, ಏಳು ವರ್ಷಗಳ ಸತತ ಸೇವೆಯನ್ನು ಆಯುಕ್ತರ ಘಟಕ ಕಛೇರಿಗಳಲ್ಲಿ ಪೂರೈಸಿರುವ ಅರ್ಹ ಗ್ರೂಪ್ ಡಿ ನೌಕರರಿಗೆ ದ್ವಿತೀಯ ದರ್ಜೆ ಸಹಾಯಕರ ವೃಂದಕ್ಕೆ ಮುಂಬಡ್ತಿ ನೀಡಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ ಅರ್ಹತೆ ಹೊಂದಿರುವ ಈ ಕೆಳಕಂಡ ಗ್ರೂಪ್ "ಡಿ"ನೌಕರರಿಗೆ ಗ್ರೂಪ್ "ಸಿ" ವೃಂದದ ವೇತನ ಶ್ರೇಣಿ ರೂ 21,400-42,000 ರಲ್ಲಿ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡಿ ಆದೇಶಿಸಿದೆ.

ಈ ನೌಕರರುಗಳಿಗೆ ಸ್ಥಳ ನಿಯುಕ್ತಿ ಆದೇಶವನ್ನು ಹೊರಡಿಸಿದ ನಂತರ ಮುಂಬಡ್ತಿ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಆರ್ಥಿಕ ಸೌಲಭ್ಯಕ್ಕೆ ಅರ್ಹರಾಗುತ್ತಾರೆ.

| ಕ್ರ.ಸಂ | ಜೇಷ್ಠತಾ ಸಂಖ್ಯೆ | ನೌಕರರ ಹೆಸರು, ಪದನಾಮ ಮತ್ತು ಕಛೇರಿ ವಿಳಾಸ ಶ್ರೀಮತಿ/ ಶ್ರೀ |
|---|---|---|
| 1 | 222 | ತೇಜೇಶ್ ಎಂ, ಗ್ರೂಪ್ ಡಿ ನೌಕರರು, ಆಯುಕ್ತರ ಕಛೇರಿ, ಬೆಂಗಳೂರು |
| 2 | 256 | ಕೆ.ಯಶೋಧಮ್ಮ ಗ್ರೂಪ್ ಡಿ ನೌಕರರು ಡಿ.ಎಸ್.ಇ.ಆರ್.ಟಿ ಕಛೇರಿ, ಬೆಂಗಳೂರು |
| 3 | 258 | ಆರ್ ವಿಲಿಯಂ, ಗ್ರೂಪ್ ಡಿ ನೌಕರರು ಆಯುಕ್ತರ ಕಛೇರಿ, ಬೆಂಗಳೂರು |
| 4 | 262 | ಟಿ. ಚಿಕ್ಕಮ್ಮ, ಗ್ರೂಪ್ ಡಿ ನೌಕರರು, ಕೆ.ಎಸ್.ಇ.ಇ.ಬಿ ಮಲ್ಲೇಶ್ವರಂ, ಬೆಂಗಳೂರು |
| 5 | 270 | ಗೋವಿಂದಸ್ವಾಮಿ, ಗ್ರೂಪ್ ಡಿ ನೌಕರರು, ಡಿ.ಎಸ್.ಇ.ಆರ್.ಟಿ ಕಛೇರಿ, ಬೆಂಗಳೂರು |
| 6 | 272 | ಹೆಚ್.ಬಿ ಭಾರತಿ, ಗ್ರೂಪ್ ಡಿ ನೌಕರರು, ಡಿ.ಎಸ್.ಇ.ಆರ್.ಟಿ ಕಛೇರಿ,ಬೆಂಗಳೂರು |
| 7 | 279 | ಬಿ.ಪಿ ಪೂರ್ಣಿಮ, ಗ್ರೂಪ್ ಡಿ ನೌಕರರು, ಡಿ.ಎಸ್.ಇ.ಆರ್.ಟಿ ಕಛೇರಿ, ಬೆಂಗಳೂರು |

ಕರ್ನಾಟಕ ಸಿವಿಲ್ ಸೇವಾ [ಸಾಮಾನ್ಯ ನೌಕರಿ ಭರ್ತಿ] ನಿಯಮಗಳು-1977ರ ನಿಯಮ 4ಎ ರಂತೆ ಬಡ್ತಿ ನೀಡಲಾದ ಈ ಕೆಳಕಂಡ ನೌಕರರು ಅಂಥ ಬಡ್ತಿಯನ್ನು ಹೊಂದಲು ಇಚ್ಛಿಸದಿದ್ದರೆ, ಈ ಆದೇಶ ದಿನಾಂಕದಿಂದ [ಸದರಿ ಆದೇಶದ ಅಧಿಸೂಚನೆಯನ್ನು ಇಲಾಖಾ ವೆಬ್‌ಸೈಟ್ **www.schooleducation.kar.in** ನಲ್ಲಿ ಪ್ರಕಟಿಸಲಾಗಿದೆ]07ದಿನಗಳ(ದಿನಾಂಕ:05-02-2021ರೊಳಗೆ) ಒಳಗೆ ನೀಡಲಾದ ಮುಂಬಡ್ತಿಯನ್ನು ಬಿಟ್ಟುಕೊಡಲು ನೇಮಕಾತಿ ಪ್ರಾಧಿಕಾರದ ಅನುಮತಿಯನ್ನು ಕೋರಿ ಲಿಖಿತ ಕೋರಿಕೆಯನ್ನು ಮುದ್ದಾಂ ಈ ಕಛೇರಿಗೆ ಸಲ್ಲಿಸುವುದು. 07 ದಿನಗಳ ನಂತರ ಬರುವ ಯಾವುದೇ ಕೋರಿಕೆಯನ್ನು ಪರಿಗಣಿಸುವುದಿಲ್ಲ.

ಮುಂಬಡ್ತಿ ಹೊಂದಿದ ನೌಕರರಿಗೆ ಜೇಷ್ಠತೆ ಅನುಸಾರ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಸಿಅಸುಇ 18 ಸೇನೌವ 2014 ದಿನಾಂಕ: 06-02-2014 ರ ಅದೇಶದಂತೆ ಅಂಗವಿಕಲ ನೌಕರರಿಗೆ ಆಧ್ಯತೆ ನೀಡಿ ಕೌನ್ಸಿಲಿಂಗ್ ಮುಖೇನ ಸ್ಥಳವನ್ನು ಆಯ್ಕೆಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು.

ಮುಂಬಡ್ತಿ ಹೊಂದಿದ ನೌಕರರುಗಳಿಗೆ ದಿನಾಂಕ: 06-02-2021 ರಂದು ಬೆಳಿಗ್ಗೆ 11.00 ಗಂಟೆಗೆ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇಲ್ಲಿ ಸ್ಥಳ ಆಯ್ಕೆ ಕೌನ್ಸಿಲಿಂಗ್ ನಡೆಸಲಾಗುವುದು. ನೌಕರರು ನಿಗಧಿತ ದಿನಾಂಕದಂದು ಕೌನ್ಸಿಲಿಂಗ್‌ಗೆ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳಲು ಸೂಚಿಸಿದೆ.

[ಮಾನ್ಯ ಆಯುಕ್ತರ ಆದೇಶದ ಮೇರೆಗೆ]

[ಸಿರಿಯಣ್ಣವರ ಲಲಿತಾ ಚಂದ್ರಶೇಖರ್]
ನಿರ್ದೇಶಕರು [ಆಡಳಿತ][ಪ್ರೌ.ಶಿ]

ಇವರಿಗೆ:

1. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ/ಕ.ಪ್ರೌ.ಶಿ.ಪ.ಮಂಡಳಿ ಬೆಂಗಳೂರು.
3. ಉಪನಿರ್ದೇಶಕರು ಹಾಗೂ ಪ್ರಭಾರಾಧಿಕಾರಿಗಳು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಬೆಂಗಳೂರು.
4. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ
5. ಹಿರಿಯ ಸಹಾಯಕ ನಿರ್ದೇಶಕರು ಇ-ಆಡಳಿತ ರವರಿಗೆ ಈ ಅಧಿಸೂಚನೆಯನ್ನು ಇಲಾಖಾ ವೆಬ್ ಸೈಟ್- www.schooleducation.kar.in "ನಲ್ಲಿ ಪ್ರಕಟಿಸಲು ತಿಳಿಸಿದೆ.
6. ಸಂಬಂಧಿಸಿದ ನೌಕರರುಗಳಿಗೆ.
7. ಕಛೇರಿ ಪ್ರತಿ.